(16) 2

Regd No. B G. 155 Sri 25—1—1965

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

ಪತ್ರಿಕೆಯ ಅಂಚೆ ವಿಳಾಸ ಎಂ ವಿ ಸುಬ್ಬರಾಯರು 2ನೆ]

ಪ್ರವಾಸ ಪ್ರವರ್ತನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸಕ್ಕನಾದ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 30 ನಯೆ ಪೈ

Protect the Cow
ಗೋಸಂರಕ್ಷಣೆ ಮಾಡಿ

ಆಹಾರಕ್ಕಾಗಿ ಜನರ ರ ಅಲೆದಾಟ

ಚಿತ್ರದುರ್ಗದ ಸುತ್ತಮುತ್ತಲ ಹಳ್ಳಿ ಜನರು ತಮ್ಮ ಮನೆಗಳನ್ನು ಪಾಳುಬಿಟ್ಟು ಚಿತ್ರದುರ್ಗ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಗಳಿಗೆ ಅಹಾರ ಹುಡುಕಿಕೊಂಡು ಹೋಗುತ್ತಿರುವ ವಾರ್ತೆ ಬಂದಿದೆ

★

ಆತ್ಮಹತ್ಯೆ

ಮೂಡಬಿದರೆಯಿಂದ ಸುಮಾರು 16 ಮೈಲು ದೂರವಿರುವ ನಾರಾವಿಯ ದೀಕಯ್ಯ ಎಂಬವನ ಪತ್ನಿ ತನ್ನ ಗಂಡನ ಎರಡನೆ ವಿವಾಹದ ಸಂಬಂಧವಾದ ಸಿದ್ಧತೆಯ ಬಗ್ಗೆ ವಿವಂಚನೆಗೊಳಗಾಗಿ ತನ್ನ ಇಬ್ಬರು ಮಕ್ಕಳಿಗೆ ವಿಷ ಉಣಿಸಿ ತಾನೂ ವಿಷ ತಿಂದು ಮರಣಹೊಂದಿದ ವಾರ್ತೆ ಬಂದಿದೆ

★

ಸತ್ಯಾಗ್ರಹವಿಲ್ಲ

ಚರ್ಚಿಲರ ನಿಧನದ ಕಾರಣ ಜನವರಿ 26 ರಂದು ಬ್ರಿಟಿಷ್ ನೆಲದಲ್ಲಿರುವ ಭಾರತ ಹೈ ಕಮಿಷನರ ಕಚೇರಿ ಸತ್ಯಾಗ್ರಹ ನಡೆಸುವುದಿಲ್ಲ.

★

ಆಗಮನ

ಎಡಿಸಿಬರೊ ಡ್ಯೂಕರು ಮಾರ್ಚ್ 9 ರಿಂದ 12 ವರೆಗೆ ಭಾರತಕ್ಕೆ ಭೇಟಿಕೊಡುವರು

★

ಜರ್ಮನ್ ನಿಯೋಗ

ನೋಟಕ್ಕಾಗಿ ನಾಳೆ ಪಶ್ಚಿಮ ಜರ್ಮನಿಯ ಕೈಗಾರಿಕಾ ನಿಯೋಗ ಮೈಸೂರಿಗೆ ಬರುವದು

ಅವಕಾಶವಿಲ್ಲ

ಗಣರಾಜ್ಯದ ದಿನ ಡಿಎಂಕೆ ಯುವರು ದುಃಖದ ದಿನವೆಂದು ಸಭೆ ನಡೆಸಲು ಅವಕಾಶವನ್ನು ಕೊಡುವದಿಲ್ಲ ಸಭೆಯನ್ನು ನಿಷೇಧಿಸಲಾಗುವದು ಎಂದೂ ಮುಖ್ಯ ಮಂತ್ರಿ ಶ್ರೀ ಭಕ್ತವತ್ಸಲಂರವರು ಮದ್ರಾಸು ವಿಧಾನ ಸಭೆಯಲ್ಲಿ ಘೋಷಿಸಿದರು

★

ಶರಾವತಿ

ಶರಾವತಿ ವಿದ್ಯುತ್ತಿನ ಯೋಜನೆಯು ಅಂಗವಾಗಿ 81900 ಕಿಲೋವಾಟುಗಳ ವಿದ್ಯುಚ್ಛಕ್ತಿ ಒದಗಿಸುವ ಮೊದಲನೆಯ ಯಂತ್ರವನ್ನು ಪ್ರಧಾನಿ ಶಾಸ್ತ್ರಿಯವರು ನಿನ್ನೆ ಉದ್ಘಾಟಿಸಿದರು ಅವರು ಮೈಸೂರು ಇಂಜಿನಿಯರ್ ಸೇವೆ ಪ್ರಶಂಸಿಸಿದರು

ಕಾಶ್ಮೀರಕ್ಕೆ ಪ್ರತ್ಯೇಕ ಅಂಚೆ ಸರ್ವಿಸ್ ಏರ್ಪಡಿಸಲಾಗುವದು

—

ಚರ್ಚಿಲರ ಮರಣ

ಬ್ರಿಟನ್ನಿನ ಮಾಜಿ ಪ್ರಧಾನಿ ಸರ್ ವಿನ್ಸ್ಟನ್ ಚರ್ಚಿಲರು ನಿನ್ನೆ ನಿಧನರಾದರು. ಅವರಿಗೆ 90 ವರ್ಷಗಳಾಗಿದ್ದವು.

ಶನಿವಾರ ನಡೆಯುವ ಅವರ ಅಂತ್ಯ ಕ್ರಿಯೆಯಲ್ಲಿ ಭಾರತದ ಪರವಾಗಿ ಶ್ರೀಮತಿ ಇಂದಿರಾ ಗಾಂಧಿ ಭಾಗವಹಿಸುವ ನಿರೀಕ್ಷೆ ಇದೆ.

ಭಾರತದ ಅಧ್ಯಕ್ಷರಾದ ಡಾ|| ರಾಧಾಕೃಷ್ಣನ್, ಪ್ರಧಾನಿ ಶಾಸ್ತ್ರಿ ಮುಂತಾದ ನಾಯಕರು ಅವರ ನಿಧನದ ಬಗ್ಗೆ ಸಂತಾಪಸಿರುವರು

ವಿವಿಧ ವಿಷಯಗಳು

ವಿಜಯವಾಡಾದಲ್ಲಿ ನಿನ್ನೆ ಪ್ರಾರಂಭವಾಗಿದ್ದ ಭಾರತೀಯ ಜನಸಂಘದ ಪ್ರತಿನಿಧಿಗಳ ಸಮ್ಮೇಳನದಲ್ಲಿ 5 ನೂರು ಮಹಿಳೆಯರೂ ಸೇರಿ ಸುಮಾರು 7 ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು ಕ್ರೈಸ್ತೀಯ ವಿಷಯಗಳಿಂದ ಮತ್ತಾರಂಭ ಕಾರ್ಯ ನಡೆಯುವದು ನಿಲ್ಲಬೇಕೆಂಬ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಭಾರತೀಯ ಜನಸಂಘದ 12 ನೇ ಅಧಿವೇಶನ ವಿಜಯವಾಡಾದಲ್ಲಿ ಪ್ರಾರಂಭವಾಗಿತ್ತು ರಾಜ್ಯಾಂಗದ 356 ಹಾಗೂ 357 ನೇ ವಿಧಿಗಳನ್ನು ಕಾಶ್ಮೀರಕ್ಕೆ ಜಾರಿ ಮಾಡಿರುವದನ್ನು ಅಧ್ಯಕ್ಷ ಬಾಬರಾಜ ವ್ಯಾಸರು ತಮ್ಮ ಭಾಷಣದಲ್ಲಿ ಸ್ವಾಗತಿಸಿದರು.

ಇಟಲಿಯ ಸಾರ್ವಭೌಮದಿಂದ ವಾರ್ತೆ ಬಂದಿದೆ 75 ವರ್ಷಸ್ಸಿನ ಜಿ|| ಅಲ್ಬರ್ಟೊ ಕಾಂಚಲೊ ಅಲ್ಲಿನ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಅಪರಾಧಿಯಾಗಿ ನಿಂತಿದ್ದ ವೊನ್ನೆ ವಿಲ್ಲೂಲಿನಿಂದ ಹೊಡೆಯಲು ಒರ್ವನನ್ನು ಮಾರಣಹೊಂದಿದನೆಂಬ. ನ್ಯಾಯಾಧೀಶರು ಹಾಗೂ ಪೋಲೀಸು ಅಧೀಕರು ಗಾಯಗೊಂಡರು

ಪ್ರಧಾನಿ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಕಾಮನ್ವೆಲ್ತಿನ ಕಾರ್ಯದರ್ಶಿ ಅರ್ಥರ್ ಬಾಟ್ಲಿಯೊಂದಿಗೆ ಮೂರೂವರೆ ಗಂಟೆ ಕಾಲ ಮಾತುಕತೆ ನಡೆಸಿದರೆಂದು ಲಂಡನ್ನಿನ ವಾರ್ತೆ.

ಸೇನಾ ಉದ್ದೇಶಕ್ಕಾಗಿ ಹೆಚ್ಚಾದ ತೂಕವಿಲ್ಲದ ಅಣು ಗಡಿಯಾರವನ್ನು ಇಷ್ಟು ಸಂಶೋಧಿಸಿದೆ ಅದು ತೂಕ 44 ಪೌಂಡುಗಳು ಉಪಗ್ರಹ ಮುಂತಾದವುಗಳನ್ನು ಅವು ತಪ್ಪಿಸಬಹುದು.

★

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲವೆಂದು ಅಧ್ಯಕ್ಷ ಅಯೂಬರು ಚಿಟಗಾಂಗಿನಲ್ಲಿ ತಿಳಿಸಿದರೆಂದು ವರದಿ ಆಗಿದೆ.

ಈ ವರ್ಷ ಅಕಾಲದ ಪರಿಸ್ಥಿತಿ ಉಂಟಾಗಿರುವ ಭೂವಿಜ್ಞಾನ ಶಾಖೆಯ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ನಿನ್ನೆ ಬೆಂಗಳೂರಿನಲ್ಲಿ ತಿಳಿಸಿದರು

ಕರ್ನೂಲು ಜಿಲ್ಲೆಯ ಕೃಷ್ಣಾ ಕಾಲೋನಿಯಲ್ಲಿ ವಿಷವಿಶ್ರಿತ ಅಹಾರದ ದೋಷದಿಂದ 22 ಜನ ಮರಣಹೊಂದಿದರೆಂಬ ಸಂಶಯ ವಂದಿ ಆಗಿದೆ.

ಪ್ರತಿಯೊಂದು ಜಿಲ್ಲ ಕೇಂದ್ರದಲ್ಲೂ ಸಹಕಾರ ಹಾಲಿನ ಡೈರಿಗಳನ್ನು ಆರಂಭಿಸುವಂತೆ ಸರ್ವ ರಾಜ್ಯ ಸರ್ಕಾರಗಳಿಗೂ ಪ್ರಧಾನಿ ಶಾಸ್ತ್ರಿಯವರು ಬೆಂಗಳೂರಿನಲ್ಲಿ ತಿಳಿಸಿದರು

ಬ್ರಿಟಿಷ್ ರಾಣಿ ಎಲಿಜಬೆತ್ ನೇತೃತ್ವದಲ್ಲಿ ಚರ್ಚಿಲರ ಅಂತ್ಯಕ್ರಿಯೆಯು ಶೋಕವೆಂವಣಿಗೆ ಕಾರ್ಯವಾಗಿ ನಡೆಯುವದು.

ರಾಜಸ್ಥಾನದ ಆರ್ಯವ್ಯಯ ಪಟ್ಟಿ ಹಿಂದಿ ಭಾಷೆಯಲ್ಲಿರುವದು

ಹುಬ್ಬಳ್ಳಿಯ ಹುಟ್ಟು ಭಂಗಾಂದಗಳ ನಾನೂರು ನೆಲಮಾಳಿಗೆಯ ಕಾರ್ಮಿಕರು ನಿಂತಲ್ಲೇ ಮುಷ್ಕರವಾರಂಭಿಸಿದರು.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ
26 ಮಂಗಳ ನವಮಿ ವಿಶಾಖ

—

ಗಣರಾಜ್ಯ ಪ್ರಯುಕ್ತ ನಾಳೆ ಸತ್ಯವಾದಿಗೆ ರಜಾ

ಅಯೂಬರ ಅಪ್ರಮಾಣಿಕತೆ !

★

ಮುಸ್ಲಿಂರು ಸಂಕಿಯಾಂಗ್ ಬಿಟ್ಟು ಓಡುತ್ತಿದ್ದಾರೆ ಎಂಬ ಶಿರೋನಾಮೆಯಲ್ಲಿ ಹಿಂದೂಸ್ತಾನ್ ಸ್ಟ್ಯಾಂಡರ್ಡ್‌ನಲ್ಲಿ ಪ್ರಕಟವಾದ ವರದಿ—

ಚಮ್ಮಡಿಗೆ ತಲುಪಿರುವ ದಾರ್ಷ್ಟ್ಯದಿಂದ, ಚೀನೀ ಆಕ್ರಮಿತ ಲಡಾಕ್ ಪೂರ್ವದ ಸಂಕಿಯಾಂಗ್‌ನಿಂದ ತನ್ನ ಮನೆಮಾರು ಬಿಟ್ಟು ಚೀನಾಗಡಿಯ ದಕ್ಷಿಣ ಪ್ರದೇಶಕ್ಕೆ ಓಡುತ್ತಿದ್ದಾರೆ ; ಸುಮಾರು 200 ಸಂಖ್ಯೆಯಲ್ಲಿರುವ ಈ ತಂಡದಲ್ಲಿ ಮುಸ್ಲಿಂ ಜಾತಿಯವರೇ ಹೆಚ್ಚಾಗಿದ್ದಾರೆ. ಮತ್ತು ತಾವು ಚೀನೀಯರ ಅಮಾನುಷ ವರ್ತನೆಗೆ ಶಿಕ್ಷಾರ್ಹರಾಗುವೆನೆಂಬ ಭೀತಿಯಿಂದ ದುರ್ಗಾಗಿರಿಗಳು ಮತ್ತು ಹಾವಳಿದಾರಿಯು ಅಲ್ಲಿ ಖಾಯಂ ಆಗಿ ವಾಸಿಸುವ ಇಷ್ಟವಿಲ್ಲದಿರುವುದರಿಂದ ತಮ್ಮ ಮನೆಮಠಗಳನ್ನು ಕೆಡವುತ್ತಿದ್ದಾರೆಂದೂ ಅಪಾದಿಸುತ್ತಿದ್ದಾರೆ.

ಉಷ್ಣಾಂಶ ಕಡಿಮೆಗೆ ಹೊಗುತ್ತಿರುವ ಗಂಟುಮೂಟೆಗಳನ್ನು ವಾಹನಗಳ ಮೇಲೆ ಹೇರಿಕೊಂಡು ಗುಂಪುಗುಂಪಾಗಿ ಹೋಗುತ್ತಿರುವ ಸಂಕಿಯಾಂಗ್ ನಿವಾಸಿಗಳನ್ನು ಭಾರತೀಯ ಸೈನಿಕರೂ ಕಂಡಿದ್ದಾರೆ

ಮುಂಬಯಿ ಪ್ರಕಾರ ಈ ನೈಕಿಲೆಲ ನಿವಾಸಿಗಳು ಪಾಕಿಸ್ತಾನ ಆಕ್ರಮಿತ ಪಶ್ಚಿಮ ಭಾಗಕ್ಕೆ ಪ್ರವೇಶಿಸಲು ಮಾಡಿದ ಪ್ರಯತ್ನವು ವಿಫಲಗೊಂಡಿತು, ಪಾಕಿಸ್ತಾನಿ ಗಾರ್ಡುಗಳು ಅವರನ್ನು ಹಿಂದಕ್ಕೊಡಿಸಿದರು.

ಈ ಈ ಅಯೂಬರು ಎಂತಹ ಅಪ್ರಮಾಣಿಕ ಮನುಷ್ಯ ! ಮುಸ್ಲಿಮರು ಭಯಭೀತರಾಗಿ ನಿಂಕಿಯಾಂಗ್ (ಚೀನಾ) ದಿಂದ ಪಾಕ್ ಕಡೆ ಓಡುತ್ತಿದ್ದಿರೆ ಮಂತ್ರಿಗಳು ಪಾಕಿಸ್ತಾನಕ್ಕೆ ಪ್ರವೇಶಿಸಲು ಪ್ರಯತ್ನಿಸುತ್ತಿದ್ದರೆ ಅವರು ಹಿಂದಟ್ಟುತ್ತಿದ್ದಾರೆ ! ಪಾಕಿಸ್ತಾನದ ನಿಂತಾತ್ಮೀತರ ದುಃಖಸ್ಥಿತಿಯನ್ನು ಕಂಡ ನಾವೂ ಜನರು ತಮ್ಮ ಮನೆಮಠಗಳನ್ನೂ ಆಸ್ತಿಪಾಸ್ತಿ ಎಲ್ಲವನ್ನೂ ಬಿಟ್ಟು ಬೇರೆ ಸುರಕ್ಷಿತವಾದ ಸ್ಥಳಕ್ಕೆ ಹೋಗುವವರ ದುರವಸ್ಥೆ ಸಂಕಟಗಳನ್ನು ಅರಿಯಬಲ್ಲೆವು ಚೀನದಿಂದ ಓಡುತ್ತಿರುವ ಮುಸ್ಲಿಂರಿಗೆ ಈ ಸಂಕಟವೂ ನಿರೀಕ್ಷಿಸಲಾಗಿದೆ :

ಒಬ್ಬ ಮುಸ್ಲಿಂನು ಭಾರತದಿಂದ ಪಾಕಿಸ್ತಾನಕ್ಕೆ ಓಡಿಹೋದರೂ ಭಾರತದ ವೇಲೆ ಕೊಡಲಾರುವ ಅಯೂಬರು, ಚೀನೀ ಮುಸ್ಲಿಂರಿಗೆ ಪಾಕಿಸ್ತಾನ ಪ್ರವೇಶಕ್ಕೆ ತುಂಬಾ ವಿರೋಧವನ್ನು ಒಡ್ಡಿ ದೃಢವಾಗಿದ್ದಾರೆ ; ಯಾಕೆಂದರೆ ಚೀನದನ್ನು ಸಮಾಧಾನಪಡಿಸಲು ಮತ್ತು ಭಾರತವನ್ನು ಅವಮಾನ ಪಡಿಸಲು ಸದಾ ಇಚ್ಛಿಸುತ್ತಾರೆ ! ಎಂತಹ ದ್ವೇಷವೂ ಅಪ್ರಮಾಣಿಕನೂ ಆಗಿರುವವರು ಈ ಅಯೂಬ ಖಾನನು ! (Truth)

ಗೋಂಕ್ಷಣೆ ಹೃದಯವಾದ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಹಾಡಹಗಲೆ ಬಾಯಿದೆ ಮುಗಿದಿರುವವರು ದಯಮಾಡಿ ತಾವತಿಯಾಗಬೇಕಾಗಿ ವಿನಂತಿ

★

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಿಣಿ ಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮುಂಡಿಪುರಂ, ಮೈಸೂರು

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamundipuram, Mysore 4

ವುಡ್‌ಲಾಂಡ್ 22-1-'65 ರಿಂದ
ಅಮೋಘ ಆರಂಭ

ಬೊಂಬಾಯಿನಲ್ಲಿ ಈಗ ಯಶಸ್ವಿಯಾಗಿ 19 ನೇ ವಾರದಲ್ಲಿ ನಡೆಯುತ್ತಿರುವ
ಅಚ್ಚಿವೆ ಚ್ಚಿಪ ಕಿಶೋರ್ ಫಲಂಸ್ ರವರ ಮನವೋಹಕ ಹಿಂದಿ ಚಿತ್ರ

ದೂರ್‌ಗರ್ಗ ಕಿ ಚಾವ್‌ಮೇ

ಪಾತ್ರ— ಕಿಶೋರಿಂಕುಮಾರ್, ಪದ್ಮಿನಿ ಚೌಧರಿ, ಮತ್ತು ಅವಿನ ಗಂಗೋಲಿ

[ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ

ಬೊಬ್ಬಲಿ ಯುದ್ಧಮು [ತೆಲುಗು]

ಪಾತ್ರ— ಎನ್ ಟಿ ರಾಮರಾವ್, ಭಾನುಮತಿ, ಎಂ ಆರ್ ರಾಧಾ, ಜಮುನಾ
ವಿಜಯಲಕ್ಷ್ಮಿ, ರಾಜನಾಲಾ, ಎಸ್ ವಿ ರಂಗರಾವ್ [ದಿನ 3 ಆಟಗಳು]

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

SHAKTI
SUDHA

Superb Tonic

Help The ' Goraksha na '

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ